# ಕರ್ನಾಟಕ ಲೋಕಾಯುಕ್ತ

**ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/3640/2021**
ಪಿ.ಓ. ಎ.ಆರ್.ಇ-06(ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ ವೀದಿ,
ಬೆಂಗಳೂರು, ದಿನಾಂಕ:29/09/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

ವಿಷಯ: 1) **ಶ್ರೀ. ಡಿ. ರಾಜಣ್ಣ ಬಿನ್ ಲೇಟ್ ದ್ಯಾವಣ್ಣ,** ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ, ಚಿತ್ರದುರ್ಗ, 2) **ಶ್ರೀ. ಬಿ.ಎಸ್. ರಾಜೇಶ್ವರಿ ಕೋಂ ಡಿ.ರಾಜಣ್ಣ,** ಮಹಿಳಾ ಮೇಲ್ವಿಚಾರಕಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, 3ನೇ ಕ್ರಾಸ್, ಜೆ.ಸಿ.ಆರ್. ಬಡಾವಣೆ, ಚಿತ್ರದುರ್ಗರವರುಗಳು ಕರ್ತವ್ಯಲೋಪ / ದುರ್ನಡತೆ ತೋರಿದ ಬಗ್ಗೆ..

*****

1. **ಶ್ರೀ. ಅಮರೇಶ್ ಎನ್. ಬಾರಾಕೇರ್,** ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ ಸದರಿ ಮಾಹಿತಿಯನ್ನು ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಿತ್ರದುರ್ಗರವರಿಗೆ ವರದಿಯನ್ನು ತಯಾರಿಸಿ 1) **ಶ್ರೀ. ಡಿ.ರಾಜಣ್ಣ ಬಿನ್ ಲೇಟ್ ದ್ಯಾವಣ್ಣ, ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ, ಚಿತ್ರದುರ್ಗ, 2) ಶ್ರೀ. ಬಿ.ಎಸ್. ರಾಜೇಶ್ವರಿ ಕೋಂ ಡಿ.ರಾಜಣ್ಣ, ಮಹಿಳಾ ಮೇಲ್ವಿಚಾರಕಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, 3ನೇ ಕ್ರಾಸ್, ಜೆ.ಸಿ.ಆರ್. ಬಡಾವಣೆ, ಚಿತ್ರದುರ್ಗ** (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಮಾನ್ಯ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಿತ್ರದುರ್ಗರವರಿಗೆ ಸಲ್ಲಿಸಿರುತ್ತಾರೆ. ಸದರಿ ದೂರಿನ ಅನ್ವಯ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಿತ್ರದುರ್ಗ ಇವರು ದೂರನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಎದುರುದಾರರುಗಳು ಅವರ ಬಲ್ಲಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಹೊಂದಿರುತ್ತಾರೆಂದು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು ಅವರ ಸೇವಾ ಅವಧಿಯಲ್ಲಿ ಖರೀದಿಸಿದ ಸ್ಥಿರಾಸ್ತಿಗಳ ಬಗ್ಗೆ, ವಾಹನ ಖರೀದಿಸಿದ ಬಗ್ಗೆ, ಸಾಲ ಪಡೆದ ಬಗ್ಗೆ ಮತ್ತು ಸ್ಥಿರಾಸ್ತಿಗಳನ್ನು ಮಾರಾಟ ಮಾಡಿದ ಬಗ್ಗೆ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ 1966 (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021)ರ ನಿಯಮಗಳನ್ನು ಪಾಲಿಸದೆ ದುರ್ನಡತೆ ತೋರಿಸಿರುತ್ತಾರೆ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/3640/202
ಪಿ.ಓ. ಎ.ಆರ್.ಇ-06

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ **ಶ್ರೀ. ಅಮರೇಶ್ ಎನ್. ಬಾರಾಕೇರ್, ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ,** ಚಿತ್ರದುರ್ಗರವರಿಗೆ ಬಂದ ಮಾಹಿತಿ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಗುಪ್ತ ವರದಿಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಚಿತ್ರದುರ್ಗರವರಿಗೆ ಸಲ್ಲಿಸಿದ್ದು, ನಂತರ ಗೌಪ್ಯ ಮಾಹಿತಿಯ ಆಧಾರದ ಮೇಲೆ ಪೊಲೀಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗರವರ ಕಚೇರಿಯ ಆದೇಶ ಸಂ.ಎಸ್.ಪಿ./ ಕ.ಲೋಕ್/ ಸಿ.ಟಿ.ಎ./01/2014, ದಿ: 03/06/2014ರ ಆದೇಶದಂತೆ ಶ್ರೀ. ಕೆ. ಸತ್ಯನಾರಾಯಣ್, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗರವರು ಅವರ ಠಾಣೆಯ ಗುನ್ನೆ ನಂ.05/2014ರಲ್ಲಿ ಕಲಂ 13(1)(ಇ) ಜೊತೆಗೆ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಎದುರುದಾರರುಗಳ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii(a) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ 1ನೇ ಎದುರುದಾರರ ಪರಿಶೀಲನಾ ಅವಧಿಯಾದ ದಿ: 11/11/2002 ರಿಂದ 04/06/2014ರವರೆಗೆ ಮತ್ತು 2ನೇ ಎದುರುದಾರರ ಪರಿಶೀಲನಾ ಅವಧಿಯಾದ ದಿ: 13/02/2004 ರಿಂದ 04/06/2014ರವರೆಗೆ ಬೇನಾಮಿಯಾಗಿ ಅವರುಗಳ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಗಳಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ. ಸಂ. | ಆಸ್ತಿಯ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಧರ್ಮಪುರ ಹೋಬಳಿ ಹೂವಿನಹೊಳೆ ಗ್ರಾಮದ ರಿ.ಸ.ನಂ.62/2 ರಲ್ಲಿ 11 ಎಕರೆ 14 ಗುಂಟೆ ಜಮೀನನ್ನು ದಿ: 16/11/2005ರಂದು ಶ್ರೀ. ವಿ.ಪರಮೇಶ್ವರಪ್ಪ ಮತ್ತು ಇತರರಿಂದ ಬೇನಾಮಿಯಾಗಿ 1ನೇ ಎದುರುದಾರರ ಸಹೋದರರ ಹೆಸರಿನಲ್ಲಿ ಖರೀದಿಸಿರುತ್ತಾರೆ. | 1ನೇ ಎದುರುದಾರರ ಸಹೋದರರು ಗಳಾದ ಡಿ. ವೀರಣ್ಣ ಮತ್ತು ಡಿ. ರಾಮಣ್ಣ. | 2,50,000/- |

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/3640/2021
ಪಿ.ಓ. ಎ.ಆರ್.ಇ–06

| | | | |
|---|---|---|---|
| 2 | ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಧರ್ಮಪುರ ಹೋಬಳಿ ಹೂವಿನಹೊಳೆ ಗ್ರಾಮದ ರಿ.ಸ.ನಂ.62/2 ರಲ್ಲಿ 11 ಎಕರೆ 14 ಗುಂಟೆ ಜಮೀನನ್ನು ದಿ: 16/11/2005ರಂದು ಶ್ರೀ. ವಿ.ಪರಮೇಶ್ವರಪ್ಪ ಮತ್ತು ಇತರರಿಂದ ಬೇನಾಮಿಯಾಗಿ 1ನೇ ಎದುರುದಾರರ ಸಹೋದರರ ಹೆಸರಿನಲ್ಲಿ ಖರೀದಿಸಿದ ಸ್ವತ್ತನ್ನು ದಿ: 16/03/2011ರಂದು ಸಹೋದರರಿಂದ ದಾನಪತ್ರ ಮಾಡಿಸಿಕೊಂಡಿರುತ್ತಾರೆ. | 1ನೇ ಎದುರುದಾರರ ಹೆಸರಿನಲ್ಲಿ. | ---- |
| 3 | ಚಿತ್ರದುರ್ಗ ಟೌನ್ 5ನೇ ಬ್ಲಾಕ್, ವಾರ್ಡ್ ನಂ.34, ಯಂಗಮ್ಮನಕಟ್ಟೆ ಪ್ರದೇಶದ ನಿವೇಶನ ಖಾತೆ ನಂ.10888, ಅಸೆಸ್‌ಮೆಂಟ್ ನಂ.18673/1 (46 X 55) ಅಡಿ ಅಳತೆಯ ನಿವೇಶನವನ್ನು ದಿ: 09/12/2011ರಂದು ಶ್ರೀ. ಎನ್. ಮಂಜುನಾಥ್‌ರವರಿಂದ 2ನೇ ಎದುರುದಾರರ ಹೆಸರಿನಲ್ಲಿ ಖರೀದಿಸಿರುತ್ತಾರೆ. | 2ನೇ ಎದುರುದಾರರಾದ ಶ್ರೀಮತಿ. ಬಿ.ಎಸ್. ರಾಜೇಶ್ವರಿರವರ ಹೆಸರಿನಲ್ಲಿ. | 7,59,000/- |
| 4 | ಚಿತ್ರದುರ್ಗ ಟೌನ್ 5ನೇ ಬ್ಲಾಕ್, ವಾರ್ಡ್ ನಂ.34, ಯಂಗಮ್ಮನಕಟ್ಟೆ ಪ್ರದೇಶದ ನಿವೇಶನ ಖಾತೆ ನಂ.10888, ಅಸೆಸ್‌ಮೆಂಟ್ ನಂ.18673/1 (46X55) ಅಡಿ ಅಳತೆಯ ನಿವೇಶನವನ್ನು ದಿ: 08/12/2011ರಂದು ಶ್ರೀ. ಎನ್. ಮಂಜುನಾಥ್‌ರವರಿಂದ 2ನೇ ಎದುರುದಾರರ ಹೆಸರಿಗೆ ಖರೀದಿಸಿದ ನಂತರ ಡ್ಯೂಪ್ಲೆಕ್ಸ್ ಮನೆಯನ್ನು ನಿರ್ಮಿಸಿರುತ್ತಾರೆ. | ಎದುರುದಾರರ ಪತ್ನಿಯ ಹೆಸರಿನಲ್ಲಿ. | 67,00,000/- |
| 5 | ಚಿತ್ರದುರ್ಗ ನಗರಸಭೆ 35ನೇ ವಾರ್ಡಿಗೆ ಸೇರಿದ ಚಿತ್ರದುರ್ಗ ತಾಲೂಕು, ಕಾವಡಿಗರ ಹಟ್ಟಿಗ್ರಾಮದ ನಗರ ಆಶ್ರಯವಸತಿ ಯೋಜನೆ ಅಡಿಯಲ್ಲಿ ನಿವೇಶನ ಸಂ.–ಸಿ.1 ರ ನಿವೇಶನವನ್ನು ದಿ: 04/11/2009ರ ಹರಾಜಿನಲ್ಲಿ ಹೆಚ್ಚಿನ ಬಿಡ್ಡುದಾರರಾಗಿ 1ನೇ ಎದುರುದಾರರು ಖರೀದಿಸಿರುತ್ತಾರೆ. | 1ನೇ ಎದುರುದಾರರ ಹೆಸರಿನಲ್ಲಿ. | 7,30,000/- |

ಈ ಮೇಲ್ಕಂಡ ಎಲ್ಲಾ ಸ್ಥಿರಾಸ್ತಿಗಳನ್ನು 1 ಮತ್ತು 2ನೇ ಎದುರುದಾರರು ಅವರ ಹೆಸರಿನಲ್ಲಿ ಮತ್ತು ಅವರ ಪತ್ನಿ ಮತ್ತು ಅವರ ಸಹೋದರರುಗಳ ಹೆಸರಿನಲ್ಲಿ ಬೇನಾಮಿಯಾಗಿ ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ. ಎದುರುದಾರರು ನಿಯಮ 23(3) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966, (ನಿಯಮ 24(3) ಪ್ರಸ್ತುತ ನಿಯಮ ಕ.ನಾ.ಸೇ. (ನಡತೆ) 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ii(b) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರುಗಳು ಅವರ ಮತ್ತು 1ನೇ ಎದುರುದಾರರ ಹೆಂಡತಿಯ ಹೆಸರಿನಲ್ಲಿ ಈ ಕೆಳಕಂಡ ವಾಹನಗಳನ್ನು ಖರೀದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ. ಸಂ. | ವಾಹನದ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ಕೆಎ-16 ಎಂ.-6346 ಹ್ಯುಂಡೈ ಐ-20 ಕಾರನ್ನು ದಿ: 08/06/2011ರಂದು ಖರೀದಿಸಿರುತ್ತಾರೆ. | 2ನೇ ಎದುರುದಾರರ ಹೆಸರಿನಲ್ಲಿ. | 5,49,328/- |
| 2 | ಕೆಎ-16-ಡಬ್ಲ್ಯೂ-8697 ಹೀರೋ ಹೋಂಡ ಮೋಟಾರ್ ಸೈಕಲ್‌ನ್ನು ದಿ: 07/06/2012ರಂದು ಖರೀದಿಸಿರುತ್ತಾರೆ. | 1ನೇ ಎದುರುದಾರರ ಹೆಸರಿನಲ್ಲಿ. | 47,576/- |

ಈ ಮೇಲ್ಕಂಡ ವಾಹನಗಳನ್ನು 1ನೇ ಎದುರುದಾರರ ಪತ್ನಿ ಮತ್ತು 2ನೇ ಎದುರುದಾರರ ಹೆಸರಿನಲ್ಲಿ ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ. ಎದುರುದಾರರುಗಳು ನಿಯಮ 23(2) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966, (ನಿಯಮ 24(4) ಪ್ರಸ್ತುತ ನಿಯಮ ಕ.ನಾ.ಸೇ. (ನಡತೆ) 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021

ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ii(c) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ 1 ಮತ್ತು 2ನೇ ಎದುರುದಾರರು ಅವರುಗಳ ಹೆಸರಿನಲ್ಲಿ ಈ ಕೆಳಕಂಡ ಬ್ಯಾಂಕ್ ಸಾಲ/ಕೈಸಾಲಗಳನ್ನು ಪಡೆದಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ. ಸಂ. | ಬ್ಯಾಂಕುಗಳ ವಿವರ | ಯಾರ ಹೆಸರಿನಲ್ಲಿ ಸಾಲ ಪಡೆಯಲಾಗಿದೆ. | ಸಾಲದ ಮೊತ್ತ ರೂ.ಗಳಲ್ಲಿ |
|---|---|---|---|
| 1 | ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಬ್ಯಾಡರಹಳ್ಳಿ ಶಾಖೆ. | 1ನೇ ಎದುರುದಾರರ ಹೆಸರಿನಲ್ಲಿ. | 3,00,000/- |
| 2 | ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಬ್ಯಾಡರಹಳ್ಳಿ ಶಾಖೆ. | 1ನೇ ಎದುರುದಾರರ ಹೆಸರಿನಲ್ಲಿ | 4,00,000/- |
| 3 | ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಚಿತ್ರದುರ್ಗ ಶಾಖೆ. (ಮನೆ ನಿರ್ಮಾಣ ಮಾಡಲು) | 2ನೇ ಎದುರುದಾರರ ಹೆಸರಿನಲ್ಲಿ | 15,00,000/- |
| 4 | ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಚಿತ್ರದುರ್ಗ ಶಾಖೆ. (ಕಾರು ಖರೀದಿಸಲು) | 2ನೇ ಎದುರುದಾರರ ಹೆಸರಿನಲ್ಲಿ | 4,50,000/- |
| 5 | ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ಚಿತ್ರದುರ್ಗ ಶಾಖೆ. (ಇತರೆ ಸಾಲಗಳಿಗಾಗಿ) | 2ನೇ ಎದುರುದಾರರ ಹೆಸರಿನಲ್ಲಿ | 65,000/- |

ಈ ಮೇಲ್ಕಂಡ ಸಾಲಗಳನ್ನು 1 ಮತ್ತು 2ನೇ ಎದುರುದಾರರ ಹೆಸರಿನಲ್ಲಿ ಪಡೆಯುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ. 1 ಮತ್ತು 2ನೇ ಎದುರುದಾರರು ನಿಯಮ 21(4) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966, (ನಿಯಮ 22(4) ಪ್ರಸ್ತುತ ನಿಯಮ ಕ.ನಾ.ಸೇ. (ನಡತೆ) 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ.

(ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

ii(d) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ 1 ಮತ್ತು 2ನೇ ಎದುರುದಾರರು ಅವರುಗಳ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ ಸಂ. | ಸ್ಥಿರ ಸ್ವತ್ತಿನ ವಿವರ | ಯಾರ ಹೆಸರಿನಲ್ಲಿ ಮಾರಾಟ ಮಾಡಲಾಗಿದೆ. | ರೂ.ಗಳಲ್ಲಿ |
|---|---|---|---|
| 1 | ತುಮಕೂರು ಬಡ್ಡಿಹಳ್ಳಿ, ವಾರ್ಡ್ ನಂ.32, ಗೋಕುಲ ಬಡಾವಣೆ, ನಿವೇಶನ ಸಂ.14, ವಿಸ್ತೀರ್ಣ 35X42 ಅಡಿ ನಿವೇಶನವನ್ನು ದಿ:30/03/2012 ರಂದು ಶ್ರೀಮತಿ ಪ್ರೇಮ ಕೋಂ ಭರತೇಶ್‌ರವರಿಗೆ ಮಾರಾಟ ಮಾಡಿರುತ್ತಾರೆ. | 2ನೇ ಎದುರುದಾರರ ಹೆಸರಿನಲ್ಲಿ. | 10,95,000/- |
| 2 | ಹಿರಿಯೂರು ಟೌನ್ ವಾರ್ಡ್ ನಂ.21, ಮಲ್ಲೇಶ್ವರ ಬಡಾವಣೆ, ನಿವೇಶನ ಸಂ.13, ವಿಸ್ತೀರ್ಣ 9X12 ಮೀ. ನಿವೇಶನವನ್ನು ದಿ: 08/12/2011ರಂದು ಕೆ.ಎಲ್. ಜಗನ್ನಾಥಚಾರ್ ಬಿನ್ ಲಿಂಗಚಾರ್ ರವರಿಗೆ ಮಾರಾಟ ಮಾಡಿರುತ್ತಾರೆ. | 1ನೇ ಎದುರುದಾರರ ಹೆಸರಿನಲ್ಲಿ. | 4,25,000/- |

ಈ ಮೇಲ್ಕಂಡ ಸ್ಥಿರಸ್ವತ್ತುಗಳನ್ನು 1 ಮತ್ತು 2ನೇ ಎದುರುದಾರರು ಮಾರಾಟಮಾಡುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದಿರುವುದಿಲ್ಲ. ಎದುರುದಾರರುಗಳು ನಿಯಮ 23(2) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966, (ನಿಯಮ 24(3) ಪ್ರಸ್ತುತ ನಿಯಮ ಕ.ನಾ.ಸೇ. (ನಡತೆ) 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

iii) ಎದುರುದಾರರುಗಳು ಅವರ ಸೇವಾ ಅವಧಿಯಲ್ಲಿ ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳನ್ನು ನಿಯಮಿಸಲಾದ ಪ್ರಾಧಿಕಾರಗಳಿಗೆ ಸಲ್ಲಿಸಬೇಕಾಗಿದ್ದು, ಎದುರುದಾರರುಗಳು ಎಲ್ಲಾ ವರ್ಷದಲ್ಲಿಯೂ ಆಸ್ತಿ ಮತ್ತು ದಾಯಿತ್ವದ ಪಟ್ಟಿಯನ್ನು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ ಮತ್ತು ಎದುರುದಾರರುಗಳು ನಿಯಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಿದ ಆಸ್ತಿ ಮತ್ತು ದಾಯಿತ್ವ ಪಟ್ಟಿಗಳನ್ನು ಸಕ್ಷಮ ಪ್ರಾಧಿಕಾರಿಗಳು ಅಂಗೀಕರಿಸಿರುವುದಿಲ್ಲ. (2002-03, 2003-04, 2004-05, 2006-07, 2010-11, 2011-12ರಲ್ಲಿ ಆಸ್ತಿ ಮತ್ತು ದಾಯಿತ್ವ ಪಟ್ಟಿ ಸಲ್ಲಿಸಿರುವುದಿಲ್ಲ.) ಎದುರುದಾರರುಗಳು ನಿಯಮ 23(1) ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 (ನಿಯಮ 24(6) ಪ್ರಸ್ತುತ ನಿಯಮ ಕ.ನಾ.ಸೇ. (ನಡತೆ) 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

iv) ತನಿಖಾಧಿಕಾರಿಗಳು ಎದುರುದಾರರುಗಳಿಗೆ ಅವರುಗಳು ಹೊಂದಿದ ಆಸ್ತಿ ಮತ್ತು ದಾಯಿತ್ವದ ಬಗ್ಗೆ ಪೂರ್ಣ ವಿವರಣೆ ಕೋರಿ ಅನುಬಂಧಗಳಲ್ಲಿ ಮಾಹಿತಿಯನ್ನು ಕೋರಿದ್ದು, ಎದುರುದಾರರುಗಳು ಪೂರ್ಣ ಮಾಹಿತಿ ಹಾಗೂ ವಿವರಣೆಯನ್ನು ಸಲ್ಲಿಸಿರುವುದಿಲ್ಲ.

3. 1 ಮತ್ತು 2ನೇ ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. 1 ಮತ್ತು 2ನೇ ಎದುರುದಾರರು ಸಾಕಷ್ಟು ಕಾಲಾವಕಾಶ ನೀಡಿದರೂ ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ. ತನಿಖಾಧಿಕಾರಿಯವರು ಸಲ್ಲಿಸಿದ ದಾಖಲೆಗಳ ಅಂಶಗಳಿಂದ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ 1 ಮತ್ತು 2ನೇ ಎದುರುದಾರರ ವಿರುದ್ಧ ನಡಾವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣಗಳು ಕಂಡುಬಂದಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ 1 ಮತ್ತು 2ನೇ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಎದುರುದಾರರು ನಿಯಮ 21(4), 23(1), 23(2) ಮತ್ತು 23(3) ಕ.ನಾಸೇ. (ನಡತೆ) ನಿಯಮಗಳು 1966 (ಪ್ರಸ್ತುತ ನಿಯಮ 22(4), 24(3), 24(4), ಮತ್ತು 24(6) ಕ.ನಾಸೇ. (ನಡತೆ) ನಿಯಮಗಳು 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6. 1ನೇ ಎದುರುದಾರರಾದ ಶ್ರೀ. ಡಿ. ರಾಜಣ್ಣ ಬಿನ್ ಲೇಟ್ ದ್ಯಾವಣ್ಣ, ಕಾರ್ಮಿಕ ನಿರೀಕ್ಷಕರು (ನಿವೃತ್ತಿ ದಿ:30/06/2027) ಮತ್ತು 2ನೇ ಎದುರುದಾರರಾದ ಶ್ರೀಮತಿ. ಬಿ.ಎಸ್. ರಾಜೇಶ್ವರಿ ಕೋಂ. ಡಿ. ರಾಜಣ್ಣ, ಮಹಿಳಾ ಮೇಲ್ವಿಚಾರಕರು (ನಿವೃತ್ತಿ ದಿ: 31/07/2032)ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

(1) 1 ಮತ್ತು 2ನೇ ಎದುರುದಾರರ ವಿರುದ್ಧ ಅಸಮತೋಲನ ಆಸ್ತಿಯನ್ನು ಹೊಂದಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಮತ್ತು ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೆ ಇರುವ ವಿಚಾರವಾಗಿ ಮಾತ್ರ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 14(ಎ)ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ ಹಾಗೂ

(2) ಭಾರತದ ಸರ್ವೋಚ್ಛ ನ್ಯಾಯಾಲಯದ ತೀರ್ಪು AIR 1978 of Hon'ble Supreme Court, Page-3047, State of Karnataka –Vs- Kempaiah, ಈ ಕೇಸಿನಲ್ಲಿ ಹೇಳಿರುವಂತೆ 1 ಮತ್ತು 2ನೇ ಎದುರುದಾರರು ಕಾನೂನು ಸಮ್ಮತದ ಆದಾಯಕ್ಕಿಂತ ಅಸಮತೋಲನ ಆದಾಯವನ್ನು ಹೇಗೆ ಹೊಂದಿದರು ಎಂಬುದರ ಬಗ್ಗೆ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ. ಆದುದರಿಂದ, ಸದರಿ ವಿಷಯಕ್ಕೆ ಸಂಬಂಧಿಸಿದ ವಿಚಾರಣೆಯನ್ನು

ಸರ್ಕಾರವೇ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರಡಿಯಲ್ಲಿ ವಿಚಾರಣೆ ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phanindra 29/9/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು-02,
ಕರ್ನಾಟಕ ರಾಜ್ಯ, ಬೆಂಗಳೂರು.